ಪಿಡಬ್ಲುಃ 1

ದಿನಾಂಕಃ 21–01–2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಯು ಎ ವಕೀಲರಿಂದಃ

ಪ್ರತಿವಾದಿಯರು ಸರ್ವೆ ನಂಬರ 187 ಹಿಸ್ಸಾ 1 ರಲ್ಲಿ ಎಷ್ಟು ವರ್ಷಗಳಿಂದ ಮನೆಕಟ್ಟಿಕೊಂಡಿದ್ದಾರೆಂದು ನನಗೆ ನಿಖರವಾಗಿ ಗೊತ್ತಿಲ್ಲಾ ಆದರೆ ಅಂದಾಜು 6–8 ವರ್ಷಗಳಿಂದ ಅವರು ಅಲ್ಲಿ ವಾಸ್ತವ್ಯ ಇದ್ದಾರೆ. ಹಂದಿಗೋಣ ಅಂಚೆ ಕಚೇರಿಯ ಪೋಸ್ಟ ಮಾಸ್ಟರಾಗಿದ್ದ ವಿಷ್ಣು ಭಟ್ಟ ಅವರು ನಮ್ಮ ಊರಿನವರಿದ್ದು ಅವರ ಪರಿಚಯ ನನಗೆ ಇದೆ. 1 ನೇ ಪ್ರತಿವಾದಿಯು ಶಾಲಾ ಶಿಕ್ಷಕರು ಎಂದರೆ ಸರಿ. ಅವರು ಈಗ ಹೊನ್ನಾವರ ತಾಲೂಕಿನಲ್ಲಿ ಶಿಕ್ಷಕರಾಗಿದ್ದು ಬೆಳಿಗ್ಗೆ ಶಾಲೆಗೆ ಹೋದರೆ ಸಂಜೆ ಮನೆಗೆ ಬರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ನಮ್ಮ ಮತ್ತು ಪ್ರತಿವಾದಿಯರ ಆಸ್ತಿ ಪೂರ್ವ ಪಶ್ಚಿಮವಾಗಿ ಇರುತ್ತದೆ. ನನ್ನ ಆಸ್ತಿಯ ಲಗ್ತಾಗಿ ಇರುವ ಆಸ್ತಿಯನ್ನು ಪ್ರತಿವಾದಿಯು ಕಬ್ಜಾ ಸಾಗುವಳಿ ಮಾಡುತ್ತಿರುವ ಪೂರ್ವದಲ್ಲಿ ಯಾರು ಅದನ್ನು ಕಬ್ಜಾ ಸಾಗುವಳಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲಾ. ನಮ್ಮ ಆಸ್ತಿಗೆ ಅನಾದಿಕಾಲದಿಂದ ಪಾಗಾರ ಇರುವುದಿಲ್ಲಾ. ನಾನು 1 ನೇ ಪ್ರತಿವಾದಿಗೆ ನ್ಯಾಯಾಲಯದಿಂದ ಕಳುಹಿಸಿದ ಸಮನ್ಸನ್ನು ಜಾರಿ ಮಾಡಿಸಲು ಹಂದಿಗೋಣ ಅಂಚೆ ಕಚೇರಿಯ ಅಂಚೆ ಪಾಲಕರನ್ನು ಒಳಹಾಕಿಕೊಂಡು ಅವರಿಗೆ ಕಳುಹಿಸಿದ ಸಮನ್ಸ "Not claimed" ಎಂದು ವಾಪಾಸು ಬರುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲಾ. 2 ಎ ನೇ ಪ್ರತಿವಾದಿಯು ಕ್ಯಾನ್ಸರ ರೋಗಿ ಎಂದರೆ ಅದನ್ನು ನಾನು ಕೇಳಿದ್ದು ಈಗ ಅವರು ಕ್ಯಾನ್ಸರ ಖಾಯಿಲೆಯಿಂದ ಗುಣಮುಖರಾಗಿದ್ದಾರೆಂದು ತಿಳಿದುಕೊಂಡಿದ್ದೇನೆ. ಅವರಿಗೆ ಖಾಯಿಲೆ ಗುಣವಾಗಿದೆ ಎಂದು ಅವರ ಸಂಬಂಧಿಯಾದ ಲತಾ ನಾಯ್ಕ ಎನ್ನುವವರು ಹೇಳಿರುತ್ತಾರೆ.

2. ನನ್ನ ಜಾಗವನ್ನು ಪ್ರಪ್ರಥಮ ಭಾರಿಗೆ 2015 ರಲ್ಲಿ ಮೋಜಣಿ ಮಾಡಿಸಿಕೊಂಡಿದ್ದೇನೆ. ಆ ರೀತಿ ಮೋಜಣಿ ಮಾಡಿಸಿಕೊಳ್ಳುವಾಗ ಸರ್ವೆ ಇಲಾಖೆಯಿಂದ ಪ್ರತಿವಾದಿಯರಿಗೆ ನೋಟೀಸು ಕಳುಹಿಸಿದ್ದಾರೆ. ಆ ರೀತಿ ನೋಟೀಸು ಕಳುಹಿಸಿದ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲಾ ಆ ಬಗ್ಗೆ ದಾಖಲೆಗಳು ಮೋಜಣಿ ಮಾಡಿದ ಸರ್ವೆಯರ ಬಳಿ ಇರುತ್ತದೆ. ನನಗೆ ಸರ್ವೆಯರಿಂದ ಬಂದಿದ್ದ ನೋಟೀಸಿನ ಪ್ರತಿಯನ್ನು ನಾನು ಹಾಜರಪಡಿಸಿಲ್ಲಾ. ಸರ್ವೆ ಮೋಜಣಿ ಆದ ನಂತರದಲ್ಲಿ 1 ನೇ ಪ್ರತಿವಾದಿಯು ಮೋಜಣಿ ನನ್ನ ಉಪಸ್ಥಿತಿಯಲ್ಲಿ ಆಗಿಲ್ಲಾ ಮತ್ತು ಅದು ಸರಿಯಾಗಿ ಆಗಿಲ್ಲಾ ಎಂದು ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ ಮೇಲ್ಮನವಿ ಸಲ್ಲಿಸಿದ್ದನು ಎಂದರೆ ನನಗೆ ಗೊತ್ತಿಲ್ಲಾ. ನನಗೆ ಈಗ ಒಂದು ದಾಖಲೆಯನ್ನು ತೋರಿಸುತ್ತಿದ್ದು ಭೂದಾಖಲೆಗಳ ಸಹಾಯಕ ನಿರ್ದೇಶಕರು ಸ್ಥಳಕ್ಕೆ ಅಳತೆ ಮಾಡಲು ದಿನಾಂಕ 16–1–2017 ರಂದು ಬಂದಿದ್ದಾಗ ನಾನು ಸರ್ವೆ ಮಾಡಲು ತಕರಾರು ಸಲ್ಲಿಸಿದ್ದು ಅದೇ ಸದರಿ ದಾಖಲೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾಸ್ತಿಯ ಬಗ್ಗೆ ಈ ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದ್ದ ಕಾರಣ ತಾನು ತಕರಾರು

ಸಲ್ಲಿಸಿದ್ದಾಗಿ ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ಮೋಜಣಿ ಮಾಡಲು ಬರುವಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರು ನನಗೆ ನೋಟೀಸು ಕಳುಹಿಸಿದ್ದು ಈಗ ನನಗೆ ತೋರಿಸುತ್ತಿರುವ



ದಾಖಲೆ ಸದರಿ ನೋಟಿಸಿನ ಪ್ರತಿ ಎಂದರೆ ಸರಿ. ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ನಾನು ದಿನಾಂಕ 16-1-2017 ರಂದು ಸಲ್ಲಿಸಿದ ತಕರಾರಿನ ಪ್ರಕಾರ ದಿನಾಂಕ 17-1-2017 ರಂದು ಭೂದಾಖಲೆಗಳ ಸಹಾಯಕ ನಿರ್ದೇಶಕರು ಸ್ಥಳಕ್ಕೆ ಬಂದು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದು ಈಗ ನನಗೆ ತೋರಿಸುತ್ತಿರುವ ದಾಖಲೆ ಅದೇ ಎಂದರೆ ನನಗೆ ಗೊತ್ತಿಲ್ಲಾ. ನಾನು ಸಲ್ಲಿಸಿದ್ದ ತಕರಾರನ್ನು ನಮ್ಮ ವಕೀಲರು ತಯಾರಿಸಿದ್ದಾರೆಂದರೆ ಸರಿ. ದಿನಾಂಕ 17-1-2017 ರಂದು ಭೂದಾಖಲೆಗಳ ಸಹಾಯಕ ನಿರ್ದೇಶಕರು ಮೋಜಣಿ ಮಾಡಲು ಬಂದಿದ್ದರಾ ಎಂದು ನಾನು ವಿಚಾರಿಸಿಲ್ಲಾ.

3. 1 ನೇ ಪ್ರತಿವಾದಿಯು ನನ್ನ ಸ್ಥಳದ ಲಗ್ತ ಸರ್ವೆ ನಂಬರನಲ್ಲಿ 1994 ರಲ್ಲಿ ಜಾಗ ಖರೀದಿ ಮಾಡಿ ಮೋಜಣಿ ಮಾಡಿಸಿ ಬಿನ್ ಶೇತ್ಕಿ ಮಾಡಿಸಿಕೊಂಡು ಅದರಲ್ಲಿ ಕಬ್ಜಾ ವೈವಾಟಿನಲ್ಲಿ ಇದ್ದಾರೆಂದರೆ ಸರಿಯಲ್ಲಾ. ನಾನು ನಮ್ಮ ವಕೀಲರ ಮೂಲಕ 1 ನೇ ಪ್ರತಿವಾದಿಗೆ ನೋಟೀಸು ಕೊಟ್ಟಿದ್ದಕ್ಕೆ ಅವರು ಏನು ಉತ್ತರ ಕೊಟ್ಟಿದ್ದಾರೆಂದು ನಾನು ಓದಿ ತಿಳಿದುಕೊಂಡಿದ್ದೇನೆ. ಪ್ರತಿವಾದಿಯರ ಜಾಗದ ಕ್ಷೇತ್ರ 0-9-6 ಇರುತ್ತದೆ. ಅದರಲ್ಲಿ ಎಷ್ಟು ಕ್ಷೇತ್ರ ಬಿನ್ ಶೇತ್ಕಿಯಾಗಿದೆ ಎಂದು ನನಗೆ ಗೊತ್ತಿಲ್ಲಾ ಅಜಮಾಸು 3 ಗುಂಟೆ ಆಗಿರಬಹುದು.1994 ನೇ ಇಸ್ವಿಯಲ್ಲಿ ನನ್ನ ಜಾಗವನ್ನು ನನ್ನ ತಂದೆ ವೈವಾಟಿ ಮಾಡುತ್ತಿದ್ದರು. ಆ ಕಾಲದಲ್ಲಿ ಸಹ ಪ್ರತಿವಾದಿಯರು ಅಲ್ಲಿಯೇ ಮನೆಕಟ್ಟಿಕೊಂಡಿದ್ದರು ಎಂದರೆ ನನಗೆ ನೆನಪಿಲ್ಲಾ.

4. ನನ್ನ ಜಾಗವನ್ನು ಅಳತೆ ಮಾಡಬೇಕಾದರೆ ಯಾವ ಯಾವ ದಾಖಲೆಗಳನ್ನು ತಂದಿದ್ದರು ಎಂದು ನನಗೆ ಹೇಳಲು ಬರುವುದಿಲ್ಲಾ. ಆ ರೀತಿ ಸರ್ವೆ ಮಾಡಿದಾಗ ಪ್ರತಿವಾದಿಯರ ಜಾಗವನ್ನು ಅಳತೆ ಮಾಡಿಲ್ಲಾ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸ್ಥಳಕ್ಕೆ ಬಂದು ಅಳತೆ ಮಾಡುವುದರಿಂದ ನನ್ನ ಸ್ಥಳ ಮತ್ತು ಪ್ರತಿವಾದಿಯರ ಸ್ಥಳದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲಾ. ಪ್ರತಿವಾದಿಯರು ನನ್ನ ಯಾವುದೇ ಕ್ಷೇತ್ರವನ್ನು ಅತಿಕ್ರಮಣ ಮಾಡಿಕೊಂಡಿಲ್ಲದೇ ಇದ್ದರೂ ಸಹ ನಾನು ಸರ್ವೆಯರನ್ನು ಕಟ್ಟಿಕೊಂಡು ಅತಿಕ್ರಮಣ ಮಾಡಿಕೊಂಡಿದ್ದಾರೆಂದು ಸರ್ವೆ ದಾಖಲೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲಾ. ಪ್ರತಿವಾದಿಯರು 1994 ನೇ ಇಸ್ವಿಯಿಂದಲೂ ಈಗ ಇರುವ ಸ್ಥಳದ ಕಬ್ಜಾದಲ್ಲಿ ಇದ್ದಾರೆಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಕುಮಟಾ.